MR.SPEAKER: Gangavati Sugar Factory comes under the Department of Industries & Commerce. It is not in co-operative sector. The answers can be readily obtgained in the Secretariat itself, here in Vidhana Soudha, you don't have to go to Ganagavati to get answers. So, it will be taken up on Monday.

ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ

2831 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಶ್ರೀ ಮಲಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಯನ್ನು ವಿಸ್ತರಣೆ ಮಾಡುವ ವಿಚಾರವ ಸರ್ಕಾರಕ್ಕಿದೆಯೇ?*

ಆ) *ಹಾಗಿದ್ದಲ್ಲಿ ಸದಸ್ಯರ ಅಭಿಪ್ರಾಯ ಪಡೆದು ವಿಸ್ತರಣೆ ಮಾಡಲಾಗುವುದೇ?*

ಶ್ರೀ ಎಸ್.ಆರ್. ಮೋರೆ ಸಹಕಾರ ರಾಜ್ಯ ಸಚಿವರು :

ಅ) ಹೌದು.

ಆ) ಭಾರತ ಸರ್ಕಾರವು ಈಗಾಗಲೇ ಅಂದರೆ ದಿನಾಂಕ 23-2-90ರಂದು ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯ ವಿಸ್ತರಣೆಗೆ ಉದ್ದೇಶಿತ ಪತ್ರ ನೀಡಿರುವುದರಿಂದ ಈಗ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ ಈ ಕಾರ್ಖಾನೆಯ ಸರ್ವ ಸಾಮಾನ್ಯ ಸಭೆಯಲ್ಲಿ ರೈತರು ಸರ್ಕಾರದ ವಿರುದ್ಧ ಯಾವ್ಯಾವ ರೀತಿ ಮಾಡಿದ್ದಾರೆಂದು ಸ್ವಲ್ಪ ತೆಗೆದುಕೊಂಡು ನೋಡಬೇಕು. ಈ ತೀರ್ಮಾನ ನೋಡಿದರೆ ಸರ್ಕಾರ ತಲೆ ತಗ್ಗಿಸಿಕೊಂಡು ಹೋಗಬೇಕು. ಈಗ 30 ಕೋಟಿ ರೂ, 22 ಕೋಟಿ ರೂ ಮತ್ತು ಎಂಟೂವರೆ ಕೋಟಿ ರೂಪಾಯಿಗಳ ಮೂರು ಪ್ರಾಜೆಕ್ಟ್‌ಗಳು ಬಂದಿವೆ. ಕೇವಲ ಭ್ರಷ್ಟಾಚಾರಕ್ಕಾಗಿ ಮೂವತ್ತು ಕೋಟಿ ರೂಪಾಯಿಗಳ ಯೋಜನೆ ಹಾಕಿಕೊಂಡು ರೈತರ ಮೇಲೆ ಭಾರ ಹೊರಿಸಬೇಕೆಂಬ ಒಂದು ಪ್ರಯತ್ನ ನಡೆದಿದೆ. ಆ ಕಾರಣಕ್ಕೆ ನಾನು ಕೇಳಿದ್ದು, ಈ ರೈತ ಸದಸ್ಯರ ಅಭಿಪ್ರಾಯ ಕೇಳಿ ವಿಸ್ತರಣೆ ಮಾಡುತ್ತೀರಾ ಹೇಗೆ? ದಿನಾಂಕ 23-8-90ರಂದು ಕೇಂದ್ರ ಸರ್ಕಾರ ಈಗಾಗಲೇ ಅದಕ್ಕೆ ಅನುಮತಿ ನೀಡಿದೆಯೆಂದು ಇವೆರು ಉತ್ತರ ಕೊಟ್ಟಿದ್ದಾರೆ. ಆದರೆ ರೈತ ಸದಸ್ಯರ ಅಭಿಪ್ರಾಯ ಕೇಳಬಾರದೆಂದು ಎಂದು ಅವರು ಹೇಳಿಲ್ಲ ಆ ಕಾರಣ ತಾವು ಸದಸ್ಯರ ಅಭಿಪ್ರಾಯ ಪಡೆಯದೆ ಇದನ್ನು ವಿಸ್ತರಣೆ ಮಾಡಬೇಕು ಎನ್ನತಕ್ಕಂಥಾದ್ದು ಹೋದ ಸಾರಿ ಸರ್ವಸಾಮಾನ್ಯ ಸಭೆಯಲ್ಲಿ ತೀರ್ಮಾನವಾಗಿದೆ. ಆ ಕಾರಣಕ್ಕೆ ಅದಕ್ಕೆ ಏನಾದರೂ ಬೆಲೆ ಕೊಡುತ್ತೀರಾ?

ಶ್ರೀ ಎಸ್.ಆರ್. ಮೋರೆ : ಅವರ ಸಾಮರ್ಥ್ಯ ಹೆಚ್ಚಿಸುವ ಬಗ್ಗೆ ಲೆಟರ್ ಆಫ್ ಇಂಡೆಂಟ್ ಗೌರ್ನಮೆಂಟ್ ಆಫ್ ಇಂಡಿಯಾದಿಂದ ಬಂದಿದೆ. ಆದರೆ ಅದಕ್ಕೆ ಟೈಮ್ ಲಿಮಿಟ್ ಇರುವುದರಿಂದ ಈಗಾಗಲೇ ಅದರ ಬಗ್ಗೆ ಆಫೀಸರ್ಸ್ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ನಿಮ್ಮ ಸಲಹೆ ಏನು?

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಸರ್ವಸಾಮಾನ್ಯ ಏನು ಕಿಮ್ಮತ್ತು ಇಲ್ಲ ಎಂದಾಯಿತು. ಆದರೆ "ಸಹಕಾರ ಸಂಘ" ಬಿಟ್ಟು "ಸರ್ಕಾರಿ ಸಂಘ" ಎಂದು ಹೆಸರನ್ನು ಬದಲಾಯಿಸಿ ಬಿಡಿ.

ಶ್ರೀ ಎಸ್.ಆರ್ ಮೋರೆ: ಈಗ ಟೈಮ್ ಮುಗಿದಿರುವುದರಿಂದ ಇದರ ಬಗ್ಗೆ ಸ್ಪೆಷಲ್ ಆಫೀಸರ್ ಕ್ರಮ ತೆಗೆದುಕೊಂಡಿದ್ದಾರೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್: ಸರ್ವಸಾಮಾನ್ಯರ ಸಭೆ ಕರೆಯಲಿಕ್ಕೆ ಟೈಮ್ ಏನು ಬೇಕಾಗಿಲ್ಲ. ಎರಡು ದಿವಸಗಳಿಗೆ ಇವರನ್ನು ಕೂರಿಸಿ ಕೇಳಿರಿ. ಆದರೆ ಸರ್ವಸಾಮಾನ್ಯರ ರೈತ ಸದಸ್ಯರ ಸಭೆಯಲ್ಲಿ ತೀರ್ಮಾನವಾಗಿರತಕ್ಕಂಥ ತೀರ್ಮಾನಕ್ಕೆ ಬೆಲೆಯಿಲ್ಲವೆಂದರೆ ಇದನ್ನು ಸಹಕಾರಿ ಸಂಘ ಎಂದು ಏತಕ್ಕೆ ಹೇಳಬೇಕು? ಸರ್ಕಾರಿ ಸಂಘ ಎನ್ನಿರಿ ನೀವೇ ಸಡೆಸಿ ಈ ಒಂದು ಸಕ್ಕರೆ ಕಾರ್ಖಾನೆ ವಿಷಯದಲ್ಲಿ ಸರ್ಕಾರ ಬಹಳಷ್ಟು ಪೇಚಿಗೆ ಸಿಕ್ಕಿದೆ. ಹಿಂದಿನ ಅನುಭವವನ್ನು ನೆನಪು ಮಾಡಿಕೊಳ್ಳಿ ಜಿಲ್ಲಾಧಿಕಾರಿ ಕಛೇರಿ ಘೇರಾವ್ ಆಯಿತು. ಹಿಂದಿದ್ದಂಥಹ ಮಾನ್ಯ ಶಾಸಕರ ಘೇರಾವ್ ಆಯಿತು. ಮಾನ್ಯ ಮಂತ್ರಿಗಳಿಗೆ ಘೇರಾವ್ ಆಯಿತು. ಈಗ ಒಹುತೇಕ ಸದಸ್ಯರ ಅಭಿಪ್ರಾಯ ಮೀರಿ ಏನಾದರೂ ತೀರ್ಮಾನ ತೆಗೆದುಕೊಂಡರೆ ಯಾವ ಮಂತ್ರಿ ಯಾವ ಶಾಸಕರು ಅಲ್ಲಿ ಅಡ್ಡಾಡಲು ಸಾಧ್ಯವಿಲ್ಲ. ತಾವು ಅದರ ಇತಿಹಾಸ ಸ್ವಲ್ಪ ತೆಗೆದುಕೊಂಡು ನೋಡಿ. ಆ ಕಾರಣ ತಾವು ಸುಮ್ಮಸುಮ್ಮನೆ ಅಧಿಕಾರಿಗಳ ಮಾತಿಗೆ ಬೆಲೆ ಕೊಡದೆ ಸರ್ವಸಾಮಾನ್ಯ ಸದಸ್ಯರ ಸಭೆ ಕರೆದು ತೀರ್ಮಾನ ಮಾಡಿ ಕಾರ್ಯಾಚರಣೆ ಮಾಡಬೇಕೆಂದು ಹೇಳುತ್ತೇನೆ. ತೀರ್ಮಾನ ಮಾಡಿ ಮುಂದಿನ ಕಾರ್ಯಾಚರಣೆ ಮಾಡಬೇಕೆಂದು ಹೇಳುತ್ತೇನೆ. ಅದನ್ನು ಮಾಡುತ್ತೀರೋ ಹೇಗೆ?

ಶ್ರೀ ಎಸ್.ಆರ್. ಮೋರೆ : ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಇದರಲ್ಲಿ ಪರಿಶೀಲನೆ ಏನಿದೆ?

ಅಧ್ಯಕ್ಷರು: ನೀವು ಹೇಳಿದ್ದನ್ನು ಅವರು ಪರಿಶೀಲನೆ ಮಾಡುತ್ತಾರೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಸರ್ವಸಾಮಾನ್ಯ ಸದಸ್ಯರ ಸಭೆಗೆ ಏನಾದರೂ ಕಿಮ್ಮತ್ತಿದೆಯೇ?

ಶ್ರೀ ಎಸ್.ಆರ್. ಮೋರೆ : ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಸಾಧ್ಯವಾದರೆ ಇನ್ನೊಂದು ಸಭೆ ಕರೆಯುತ್ತೇವೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಅಂದರೆ ಜನರಲ್ ಬಾಡಿ ಮೀಟಿಂಗ್ ತೀರ್ಮಾನವನ್ನು ನೀವು ಉಲ್ಲಂಘಿಸಿ ಪರಿಶೀಲನೆ ಮಾಡುತ್ತೀರಿ ಎಂದಾಯಿತು ಅಲ್ಲವೇ?

ಶ್ರೀ ಎಸ್.ಆರ್. ಮೋರೆ : ಅದರ ಬಗ್ಗೆ ಅಲ್ಲ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಸದಸ್ಯರು ಅಭಿಪ್ರಾಯ ಪಡೆದು ವಿಸ್ತರಣೆ ಮಾಡುತ್ತೇವೆಂದು ಹೇಳಿದ್ದೀರಿ.

ಅಧ್ಯಕ್ಷರು : ಈಗ ತಾವು ಯಾವುದನ್ನು ಪರಿಶೀಲನೆ ಮಾಡುತ್ತೀರಿ?

ಶ್ರೀ ಎಸ್.ಆರ್. ಮೋರೆ : ನಿಮ್ಮ ಮಾನ್ಯ ಸದಸ್ಯರು ಸರ್ವಸಾಮಾನ್ಯರ ಸಭೆ ತೀರ್ಮಾನ ಉಲ್ಲಂಘನೆಯಾಗಿದೆಯೆಂದು ಹೇಳಿದ್ದಾರಲ್ಲಾ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಸರ್ವಸಾಮಾನ್ಯರ ಸಭೆಯಲ್ಲಿ ರೈತ ಸದಸ್ಯರು ತೆಗೆದುಕೊಂಡ ತೀರ್ಮಾನದ ಮೇಲೆ ಪರಿಶೀಲನೆ ಮಾಡುವಂಥ ಅಧಿಕಾರ ಮಾನ್ಯಮಂತ್ರಿಗಳಿಗೆ ಇದೆಯೇ? ಅದನ್ನು ತಿಳಿಸಬೇಕು.

ಶ್ರೀ ಎಸ್.ಆರ್. ಮೋರೆ : ಅದರ ಬಗ್ಗೆ ತಾವು ಠರಾವು ತರಿಸಿ ನೋಡುತ್ತೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಮಾನ್ಯ ಸಹಕಾರಿ ಭೀಷ್ಮರು ಸ್ವಲ್ಪ ಉತ್ತರ ಹೇಳಿದರೆ ನನ್ನ ಮನಸ್ಸಿನಲ್ಲಿನ ಸಂದೇಹ ನೀವಾರಣೆಯಾಗುತ್ತದೆ.

ಪ್ರೊ॥ ಎಂ.ಡಿ. ನಂಜುಂಡಸ್ವಾಮಿ : ಈ ಸರ್ಕಾರಕ್ಕೆ ಅಲ್ಲಿ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಏನು ರೆಸಲ್ಯೂಶನ್ ಮಾಡುತ್ತಾರೆ ಅದನ್ನು ಮೀರಿ ನಡೆಯುವಂಥ ಅಧಿಕಾರ ಸರ್ಕಾರಕ್ಕೆ ಇದೆಯೇ ಎಂದು ಬಾಬಾಗೌಡ ಪಾಟೀಲರು ಕೇಳುತ್ತಿದ್ದಾರೆ.

ಅಧ್ಯಕ್ಷರು : ಜನರಲ್ ಬಾಡಿ ಮೀಟಿಂಗ್ ರೆಕಮೆಂಡೇಶನ್ಸ್‌ನ್ನು ಮೀರಿ ನಡೆಯುವ ಅಧಿಕಾರ ಸರ್ಕಾರಕ್ಕೆ ಇದೆಯೇ ಎಂದು ಕೇಳುತ್ತಿದ್ದೀರಾ?

ಶ್ರೀ ಕೆ.ಹೆಚ್. ಪಾಟೀಲ್ : ಜನರಲ್ ಬಾಡಿ ಮೀಟಿಂಗ್ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಮಾನ ಏನಿದೆ ಅದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ. ಪರಿಶೀಲನೆ ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನನಗೆ ಸರಿಯಾದ ಉತ್ತರವನ್ನು ತಾವು ಸರ್ಕಾರದಿಂದ ಕೊಡಿಸಬೇಕು. ಸರ್ವಸಾಮಾನ್ಯ ಸಭೆಯಲ್ಲಿ ರೈತ ಸದಸ್ಯರು ತೆಗೆದುಕೊಂಡಂಥ ತೀರ್ಮಾನಕ್ಕೆ ಸರ್ಕಾರ ಬದ್ಧವಾಗಿದೆಯೇ?

ಅಧ್ಯಕ್ಷರು : ಸರ್ವಸಾಮಾನ್ಯ ಸದಸ್ಯರ ಸಭೆಯಲ್ಲಿ ಯಾರು ಯಾರಿದ್ದಾರೋ ಅವರೆಲ್ಲರೂ ಸದಸ್ಯರೇ?

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಎಲ್ಲಾ ಹದಿನಾರು ಸಾವಿರ ರೈತ ಸದಸ್ಯರು ಷೇರ್ ಹೋಲ್ಡರ್ಸ್ ಅವರೆಲ್ಲಾ ತೆಗೆದುಕೊಂಡಂಥ ನಿರ್ಣಯ ಅದು ರೈತ ಸದಸ್ಯರ ಅಭಿಪ್ರಾಯದ ಮೇರೆಗೆ ವಿಸ್ತರಣೆಯಾಗಬೇಕು. ಅನಂತರ ರೈತ ಸದಸ್ಯರ ಪ್ರತಿನಿಧಿಗಳಿಂದ ವಿಸ್ತರಣೆಯಾಗಬೇಕು. ಅಧಿಕಾರಿಗಳಿಂದ ಆಲ್ಲವೆಂದು ತೀರ್ಮಾನವಾಗಿದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ ಇದಕ್ಕೆ ಕಾರಣ ಇಚ್ಛೆ ಈ ವರ್ಷ ಮೂವತ್ತು ಕೋಟಿ ರೂಪಾಯಿಗಳ ಎಕ್ಸ್‌ಪ್ಯಾನ್‌ಶನ್ ಪ್ರೋಗ್ರಾಂ ಹಾಕಿಕೊಂಡಿದ್ದಾರೆ. ಎಕ್ಸ್‌ಪ್ಯಾನ್‌ಶನ್ ಮಾಡುವುದಕ್ಕೆ ಅಧಿಕಾರಿಗಳಿಗೆ ಉತ್ಸಾಹ ಜಾಸ್ತಿಯಾಗಿದೆ. ಇವರ ಉತ್ಸಾಹ ಹೋಡಿ ರೈತರಿಗೆ ಗಾಭರಿಯಾಗಿದೆ.

ಶ್ರೀ ಎಸ್.ಆರ್. ಮೋರೆ : ಇನ್ನೆರಡು ತಿಂಗಳಲ್ಲಿ ಎಲೆಕ್ಷನ್ ಮಾಡುತ್ತೇವೆ. ಆಗ ಅವರು ಆರಿಸಿ ಬರುತ್ತಾರೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಚುನಾವಣೆ ಆದ ಬಳಿಕ ಎಕ್ಸ್‌ಪ್ಯಾನ್‌ಶನ್ ಮಾಡಬೇಕು. ಚುನಾವಣೆ ಆಗುವವರೆಗೆ ಎಕ್ಸ್‌ಪ್ಯಾನ್‌ಶನ್ ಮಾಡಕೂಡದು.

ಶ್ರೀ ಎಸ್.ಆರ್. ಮೋರೆ : ಲೆಟರ್ ಆಫ್ ಇಂಡೆಂಟ್ ಪ್ರಕಾರ ಟೈಮ್ ಶೆಡ್ಯೂಲ್ ಪ್ರಕಾರ ಅವರು ಕೆಲಸ ಮಾಡುತ್ತಿರುತ್ತಾರೆ. ಅದನ್ನು ಉಲ್ಲಂಘಿಸಿ ನಾವು ಟೈಮ್ ಅನ್ನು ಕಳೆದುಕೊಳ್ಳಬಾರದು.

MR.SPEAKER : There are two stages. ಈಗ ಲೆಟರ್ ಆಫ್ ಇಂಟೆಂಟ್ ಕೊಟ್ಟಿದಾರೆ.. this letter of inent has to be converted into licence. It will take quite some time. In the meanwile, there will be General Body election. I can assure on his behalf that the expansion will not be able to take place even if the officer wanted before the letter of intent is converted into licence. There is plenty of time.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಈ ಮಧ್ಯೆ ಜನರಲ್ ಬಾಡಿ ಮೀಟಿಂಗ್ ಕರೆದು ತೀರ್ಮಾನಕ್ಕೆ ಬರಲಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಚುನಾವಣೆ ನಂತರ ರೈತರ ಪ್ರತಿನಿಧಿಗಳು ಆಯ್ಕೆಯಾದ ನಂತರ ಎಕ್ಸ್‌ಪ್ಯಾನ್‌ಶನ್ ಮಾಡುತ್ತೇವೆಂದು ಒಂದು ಆಶ್ವಾಸನೆ ಕೊಟ್ಟರೆ ಸಾಕು.

ಅಧ್ಯಕ್ಷರು : ಇನ್ನೆರಡು ತಿಂಗಳಲ್ಲಿ ಚುನಾವಣೆ ನಡೆಸುತ್ತೇವೆಂದು ಹೇಳಿದ್ದಾರೆ.

ಶ್ರೀ ಹೆಚ್.ಎಸ್. ಕೌಜಲಗಿ : ಈಗ ಎಕ್ಸ್‌ಪ್ಯಾನ್‌ಶನ್‌ಗೆ ಏನಾಗಿದೆಯೆಂದರೆ ರೈತರು ಬೇರೆ ಬೇರೆಯಾಗಿ ಎಪ್ಪತ್ತು ರೂ ತೆಗೆದುಕೊಳ್ಳುತ್ತಾರೆ. ಎಕ್ಸ್‌ಪ್ಯಾನ್‌ಶನ್ ಮಾಡದೆಹೋದರೇ ಆ ಟೈಮಿನೊಳಗೆ ಲೈಸೆನ್ಸ್ ಲ್ಯಾಪ್ಸ್ ಆಗುತದೆ. ಕೊನೆಗೆ ಮೂರು ಸೈಟ್ ಹಾಗೆಯೇ ಉಳಿಯುತ್ತದೆ. ಸೈಟಿನ ರೊಕ್ಕ ಏರುತ್ತಾಹೋಗುತ್ತದೆ. ಆ ಕಾರಣಕ್ಕೆ ಕೂಡಲೇ ಅವರ ಜನರಲ್ ಬಾಡಿ ಮೀಟಿಂಗ್ ಕರೆಯಬೇಕು. ಆದರೆ ಎಕ್ಸ್‌ಪ್ಯಾನ್‌ಶನ್ ಮಾಡುವಂತಹ ಕೆಲಸವನ್ನು ಕೂಡಲೇ ತೆಗೆದುಕೊಳ್ಳಬೇಕು? ಮತ್ತು ಲೈಸೆನ್ಸ್ ಯಾವುದೇ ಪರಿಸ್ಥಿತಿಯೊಳಗೆ ಲ್ಯಾಪ್ಸ್ ಆಗದಂತೆ ನೋಡಿಕೊಳ್ಳಬೇಕು.

ಅಧ್ಯಕ್ಷರು : ನೀವು ಹೇಳಿದ ಮೂರು ವಿಚಾರಗಳನ್ನು ಕೂಡಲೇ ಗಮನಿಸುತ್ತಾರೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಜನರಲ್ ಬಾಡಿ ಮೀಟಿಂಗ್ ಕರೆದು ತೀರ್ಮಾನ ಮಾಡುತ್ತೇವೆಂಬ ಒಂದು ಉತ್ತರ ಕೊಡಿಸಿ. ಇಲ್ಲಾಂದರೆ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಆಗಬಹುದು.

MR. SPEAKER : The government has agreed, in principle, that elections will be held. I want the Government to take note of it..

ವಿದ್ಯುತ್ ಸರಬರಾಜಿನ ಬಗ್ಗೆ

2811 - ಶ್ರೀ ಇ. ವಿಜಯಕುಮಾರ್ (ಹೊಸದುರ್ಗ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದುರ್ಗ ತಾಲ್ಲೂಕಿನ ಪರಿಶಿಷ್ಟ ವರ್ಗಗಳ ಜನಾಂಗವಿರುವ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾರ್ಯಕ್ರಮವಿದೆಯೇ?